# ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ.ನಂಃ446/2014**

ಸಿಡಬ್ಲು-1

| | | |
|---|---|---|
| ಹೆಸರು | : | ಎಂ.ಎ.ಅಲೀಮ್ |
| ತಂದೆಯ ಹೆಸರು | : | ಎಂ.ಎ.ಕಲೀಮ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಪಿ.ಎಸ್.ಐ. ಹೊಕ್ರಾಣಾ ಪೊಲೀಸ ಠಾಣೆ ತಾಃ ಔರಾದ್(ಬಿ) |
| ವಾಸಸ್ಥಳ | : | ಹೊಕ್ರಾಣಾ |
| ದಿನಾಂಕಃ | ಃ | 04-03-2020 ಸತ್ಯಪ್ರತಿಜ್ಞೆ ಮೇರೆಗೆ |

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

ದಿನಾಂಕಃ 17-03-2019 ರಿಂದ 15-06-2019 ರ ವರೆಗೆ ರಟಕಲ್ ಪೊಲೀಸ ಠಾಣೆಯಲ್ಲಿ ಪಿ.ಎಸ.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 19-04-2019 ರಂದು ನ್ಯಾಯಾಲಯದ ಉದ್ಘೋಷಣೆಯಂತೆ ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಆರೋಪಿಯಾದ ಅನೀಷ್ ಅಲಿ ತಂದೆ ಶಖತ್ ಅಲಿರವರು ವಾಸವಾಗಿದ್ದ ಸಂತ್ರಸ್‌ವಾಡಿ ಗುಲಬರ್ಗಾಕ್ಕೆ ಭೇಟಿ ನೀಡಿ ಲಿಯಾಖತ್ ಮತ್ತು ಫೈಜಲ್ ಅಹ್ಮದ್‌ರವರಿಗೆ ವಿಚಾರಿಸಲಾಗಿ ಸದರಿ ಆರೋಪಿತರು ಸದರಿ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸದರಿ ಲಿಯಾಖತ್ ಮತ್ತು ಫೈಜಲ್ ಅಹ್ಮದರವರ ಸಮಕ್ಷಮ ಉದ್ಘೋಷಣೆ ವಾರಂಟ್‌ನ್ನು ಸಿಟಿ ಬಸಸ್ಟ್ಯಾಂಡ್ ಹತ್ತಿರ ಇರುವ ಜಮೀಲ್ ಟೀ ಅಂಗಡಿಯ ಮುಂದೆ, ಹಳೆ ಎಂಪ್ಲಾಯ್‌ಮೆಂಟ್ ಆಫೀಸ್, ಬಸವೇಶ್ವರ ಕಾಲೋನಿಯ ಮುಖ್ಯರಸ್ತೆಯ ಕೀರಾಣಿ ಅಂಗಡಿ, ಸಾತ್‌ಗುಂಬಜ್ ಕಡೆಗಳಲ್ಲಿ ಅಂಟಿಸಿ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ತಾವು ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಂಜೆ 5.00 ಗಂಟೆ ಸುಮಾರಿಗೆ ಆರೋಪಿಯಾದ ಮುಬೀನ್ ತಂದೆ ಕರೀಮ್‌ಸಾಬ್ ರವರು ವಾಸವಾಗಿದ್ದ ಬ್ಯಾಂಕ್ ಕಾಲೋನಿ ಗುಲಬರ್ಗಾಕ್ಕೆ ಭೇಟಿ ನೀಡಿ ಮಹಾಂತೇಶ ತಂದೆ ಶಿವಶರಣಪ್ಪ ಮತ್ತು ಮತೀನ್ ಪಾಶಾ ತಂದೆ ಶೇಕ್ ಮಹೆಬೂಬ್ ರವರಿಗೆ ವಿಚಾರಿಸಲಾಗಿ ಸದರಿ ಆರೋಪಿತನು ಸದರಿ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸದರಿ ಮಹಾಂತೇಶ ಮತ್ತು ಮತೀನ್ ಪಾಶಾ ರವರ ಸಮಕ್ಷಮ ಉದ್ಘೋಷಣೆ ವಾರಂಟ್‌ನ್ನು ಲಹೋಟಿ ಪೆಟ್ರೋಲ್ ಪಂಪ್, ದಿಲ್‌ವಾಲೆ ಪಾನ್‌ಶಾಪ್, ಗುರುನಂಜೇಶ್ವರ ಲಿಜಿಂಗ್ ಫೈನಾನಸ್ ಮತ್ತು ಮಹಜೀದ್ ಹತ್ತಿರ ಸಂಜೆ 5.30 ರಿಂದ 7.00 ಗಂಟೆಯವರೆಗೆ ಅಂಟಿಸಿ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ತಾವು

ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ-2 (ಎ) ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ